**ಪಾಠ–7** **ನವೆಂಬರ್ 7–13**

# ದೇವರ ವಾಕ್ಯವನ್ನು ಹಂಚಿಕೊಳ್ಳುವುದು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ದಾನಿ 3, ಪ್ರಕ 14:6–12; ಕೀರ್ತನೆ 78:1–17; ಯೋಹಾನ 4:7–26; 1 ಪೂ.ವೃ.ಕಾ 16:1–30; ಮಾರ್ಕ 7:1–13.

**ಸ್ಮರಣವಾಕ್ಯ : "ಯೆಹೋವನ ನಾಮಕ್ಕೆ ಯೋಗ್ಯವಾದ ಘನವನ್ನು ಸಲ್ಲಿಸಿರಿ; ಕಾಣಿಕೆ ಸಹಿತ ಆತನ ಸನ್ನಿಧಿಗೆ ಬನ್ನಿರಿ. ಪರಿಶುದ್ಧತ್ವವೆಂಬ ಭೂಷಣದೊಡನೆ ಯೆಹೋವನಿಗೆ ನಮಸ್ಕರಿಸಿರಿ"** (1 ಪೂ.ಕಾ.ವೃ. 16:29).

ಆರಾಧನೆ ಮಾನವಕುಲದ ಒಂದು ಭಾಗ; ಮಾನವ ಸ್ವಭಾವದ ಒಂದು ಭಾಗ ಸಹ. ಅಧಃಪತನಗೊಂಡ ಮಾನವನ ಸ್ವಭಾವದಲ್ಲೂ ಇದೊಂದು ಭಾಗವೇ ಆಗಿದೆ. ದೇವರು ನಮ್ಮನ್ನು ಸೃಷ್ಟಿಮಾಡಿದನು. ನಮಗೆ ಆಯ್ಕೆಯ ಸ್ವಾತಂತ್ರ್ಯ ಕೊಟ್ಟನು. ನಾವು ಆತನನ್ನು ಬಹಳವಾಗಿ ಪ್ರೀತಿಸುವುದರಿಂದಲೇ ಆತನನ್ನು ಆರಾಧಿಸುತ್ತೇವೆ. ಆತನು ಆರಾಧನೆಗೆ ಯೋಗ್ಯನೇ. ಈ ವಿಷಯದಲ್ಲಿ ಯಾವ ಪ್ರಶ್ನೆಯೂ ಇಲ್ಲ. ಮಾನವನ ಅಧಃಪತನಕ್ಕೆ ಪೂರ್ವದಲ್ಲಿ ಮಾನವರು ದೇವರನ್ನು ಮುಖಾಮುಖಿಯಾಗಿ ನೋಡುತ್ತಿದ್ದರು. ಅಂದಿನ ಭೂಲೋಕ ಪಾಪದಿಂದ, ಮರಣದಿಂದ ಮತ್ತು ವಿನಾಶದಿಂದ ಕುರೂಪಗೊಂಡಿರಲಿಲ್ಲ. ಆದರೆ ನಮಗೆ ಇಂದು ಗೊತ್ತಿರುವ ಭೂಲೋಕ ಅಧಃಪತನಗೊಂಡ ಭೂಲೋಕ.

---

* ನವೆಂಬರ್ 14ರ ಸಬ್ಬತ್ತಿನ ಸಿದ್ಧತೆಗೆ ಈ ವಾರದ ಪಾಠವನ್ನು ಓದಿಕೊಳ್ಳಿರಿ.

ಆದ್ದರಿಂದ ಹಿಂದೆ ಇದ್ದ ಪಾಪರಹಿತ ಭೂಮಿಯನ್ನು ನಮ್ಮಿಂದ ಕಲ್ಪನೆ ಮಾಡಿ ಕೂಡ ನೋಡಲಾಗದು.

ಇಂದೂ ಸಹ, ನಮ್ಮ ಸ್ವಭಾವಸಿದ್ಧ ಮನಸ್ಸಿನಲ್ಲಿ ಆರಾಧನೆ ಮಾಡಬೇಕು ಎಂಬ ತುಡಿತ ಇದ್ದೇ ಇದೆ. ಆದರೆ ಈ ಪ್ರಪಂಚದಲ್ಲಿ ಎಲ್ಲವೂ ಪಾಪದ ದಶೆಯಿಂದ ತಿರುಚಲ್ಪಟ್ಟಿದೆ; ಕುರೂಪಗೊಂಡಿದೆ. ಈ ನಿಮಿತ್ತ ಆರಾಧನೆ ಮಾಡುತ್ತಿರುವ ಜೀವಿಗಳು ತಪ್ಪಾದ ವಸ್ತುಗಳನ್ನು ಆರಾಧಿಸುತ್ತಿರಬಹುದು ಅಥವಾ ಸತ್ಯನಾದ ದೇವರನ್ನು, ಆತ ಹೇಗೆ ಆರಾಧನೆ ಮಾಡಬೇಕು ಎಂದು ಹೇಳಿದ್ದಾನೋ, ಅದಕ್ಕೆ ತದ್ವಿರೋಧವಾದ ರೀತಿಯಲ್ಲಿ ಆರಾಧನೆಗಳನ್ನು ಮಾಡುತ್ತಿರುವ ಸಾಧ್ಯತೆಯೂ ಉಂಟು (ಮಾರ್ಕ 7:1–13; ಯೆರೆಮೀಯ 7:4ನ್ನು ಓದಿನೋಡಿರಿ).

ಕ್ರೈಸ್ತೀಯ ಅನುಭವಕ್ಕೆ ಆರಾಧನೆಯೇ ಕೇಂದ್ರಬಿಂದು ಆಗಿರುವುದರಿಂದ, ಕ್ರೈಸ್ತೀಯ ಶಿಕ್ಷಣ ಆರಾಧನೆಯ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಬೇಕು. ನಮ್ಮ ಈ ವಾರದ ಅಧ್ಯಯನ ವಿಷಯವೂ ಅದೇ ಆಗಿದೆ.

**ಭಾನುವಾರ** **ನವೆಂಬರ್ 8**

## ನಾವೆಲ್ಲರೂ ಏನಾದರೂ ಒಂದನ್ನು ಆರಾಧನೆ ಮಾಡುತ್ತೇವೆ

ನಮ್ಮಲ್ಲಿ ಏನೋ ಒಂದು ಇದೆ. ಅನುಮಾನವೇ ಬೇಡ. ಏನೋ ಒಂದನ್ನು ನಮ್ಮ ಬಾಳಿನಲ್ಲಿ ಹಾಸುಹೊಕ್ಕಾಗುವಂತೆ ಮಾಡಿದ್ದಾನೆ ದೇವರು. ಯಾವ ರೀತಿಯಲ್ಲಿ ಎಲ್ಲವೂ ಪಾಪದಿಂದ ವಿರೂಪಗೊಂಡವೋ ಅದೇ ರೀತಿಯಲ್ಲಿ ನಮಗಿರುವ ಆರಾಧನೆಯ ಬಲವನ್ನೂ ಸಹ ಪಾಪ ವಿರೂಪಗೊಳಿಸಿತು. ಆದಿಯಲ್ಲಿ, ನಮ್ಮ ಕರ್ತನೂ ಮತ್ತು ಸೃಷ್ಟಿಕರ್ತನೂ ಆಗಿ, ಆತನೊಬ್ಬನೆ ಆರಾಧನೆಗೆ ಯೋಗ್ಯನಾದ್ದರಿಂದ, ಜನ ಆತನೊಬ್ಬನನ್ನೇ ಆರಾಧನೆ ಮಾಡುತ್ತಿದ್ದರು. ಮಾನವನ ಅಧಃಪತನವಾದಂದಿನಿಂದ ಎಲ್ಲವೂ ಬಲವಾದ ಬದಲಾವಣೆಗೆ ಒಳಗಾಯಿತು.

ಹೌದು, ನಾವೆಲ್ಲರೂ, ಏನೋ ಒಂದನ್ನು, ಯಾರೋ ಒಬ್ಬರನ್ನು ಆರಾಧನೆ ಮಾಡುತ್ತಿರುತ್ತೇವೆ. ಈ ಮಾತು, ಮಾನವನ ಇತಿಹಾಸದುದ್ದಕ್ಕೂ, ಇಂದಿನ ತನಕವೂ, ಮಾನವರು ಯಾಕೆ ಆರಾಧನೆಯನ್ನು ಅಭ್ಯಾಸ ಮಾಡಿಕೊಂಡು ಬರುತ್ತಿದ್ದಾರೆ ಎಂಬುದನ್ನು ವಿವರಿಸಲು ಸಹಾಯ ಮಾಡುತ್ತದೆ. ಪುರಾತನ

ಈಜಿಪ್ಟ್‌ನಲ್ಲಿ ಜನರು ಫರೋಹನನ್ನು ಆರಾಧಿಸುತ್ತಿದ್ದರು. ಮುಂದಿನ ಕಾಲಗಳಲ್ಲಿ ಬೇರೆ ಬೇರೆ ದೇಶಗಳಲ್ಲಿ ಜನರು ಮೀನಿನ ವಿಗ್ರಹಗಳನ್ನೂ, ಬಹುತಲೆಯುಳ್ಳ ದೇವರುಗಳನ್ನೂ, ಮತ್ತಿತರ ದೇವತೆಗಳನ್ನೂ ಪೂಜಿಸಲಾರಂಭಿಸಿದರು. ಇನ್ನು ಕೆಲವರು ಸೂರ್ಯ, ಚಂದ್ರ, ನಕ್ಷತ್ರಗಳನ್ನು ಆರಾಧಿಸಿದರು.

ಇಂದು, ಕಪ್ಪೆಯ ವಿಗ್ರಹದ ಮುಂದೆ ಅಡ್ಡಬೀಳಬಾರದ ಹಾಗೆ ಜನರು ಸುಶಿಕ್ಷಿತರಾಗಿದ್ದಾರೆ (ಆದರೆ ಮರಿಯಳ ಪ್ರತಿಮೆಗೆ ಅಡ್ಡಬೀಳುವುದನ್ನು ಬಿಟ್ಟಿಲ್ಲ). ಇದರ ಅರ್ಥ ಮಾನವರು, ಪ್ರಾಪಂಚಿಕರಾಗಿದ್ದರೂ ಸರಿಯೇ ಏನೋ ಒಂದನ್ನು ಪೂಜಿಸುವುದಿಲ್ಲ. ಹಣ, ಅಧಿಕಾರ, ಕಾಮ, ತಮ್ಮನ್ನು ತಾವೇ, ನಟನಟಿಯರನ್ನು ರಾಜಕೀಯ ವ್ಯಕ್ತಿಗಳನ್ನು ಕೂಡ ಪೂಜಿಸುವುದಿಲ್ಲ. ನಾವು ಯಾವುದನ್ನು ಬಹಳವಾಗಿ ಪ್ರೀತಿಸುತ್ತೇವೆಯೋ, ಯಾವದರ ಮೇಲೆ ನಮ್ಮ ಮನಸ್ಸು ಹೆಚ್ಚು ಆಕರ್ಷಣೀಯುವಾಗುತ್ತದೆಯೋ, ಯಾವುದಕ್ಕಾಗಿ ನಾವು ಜೀವಿಸ ಬಯಸುತ್ತೇವೆಯೋ, ಅವುಗಳನ್ನೇ ನಾವು ಪೂಜ್ಯಭಾವದಿಂದ ಕಾಣುತ್ತೇವೆ. ಲೌಕಿಕ ಬರಹನಾದ ಡೇವಿಡ್ ಫಾಸ್ಟರ್ ವಾಲೆಸ್ ಹೀಗೆ ಬರೆದಿದ್ದಾನೆ: ನೀವು ತಪ್ಪಾದದ್ದನ್ನು ಪೂಜಿಸಿದರೆ: ಅದು "ನಿಮ್ಮನ್ನು ಸಜೀವವಾಗಿ ನುಂಗಿ ಹಾಕಿ ಬಿಡುತ್ತದೆ".

**ದಾನಿಯೇಲ 3ನೇ ಅಧ್ಯಾಯದ ಸತ್ಯಘಟನೆ, ನಿಜವಾದ ಆರಾಧನೆಯನ್ನು ಕುರಿತು ನಮಗೆ ಮಾಡುವ ಬೋಧನೆಯೇನು?**

____________________________________

____________________________________

ದೇವರು ಎರಡನೇ ಆಜ್ಞೆಯನ್ನು (ವಿ.ಕಾ 20:4–6) ಎಷ್ಟು ಗಂಭೀರವಾಗಿ ಪರಿಗಣಿಸಬೇಕೆಂದು ಹೇಳಿದ್ದನೋ, ಈ ಯೆಹೂದಿ ಯುವಕರು, ಆಜ್ಞೆಯನ್ನು ಅಷ್ಟೇ ಗಂಭೀರವಾಗಿ ತಮ್ಮ ಮನಸ್ಸಿಗೆ ತೆಗೆದುಕೊಂಡಿದ್ದರು. ಈ ಆಜ್ಞೆ, ದಶಾಜ್ಞೆಯ ಒಂದು ಭಾಗವಾಗಿ, ಕೊಲೆ ಮಾಡಬಾರದು, ಕಳ್ಳತನ ಮಾಡಬಾರದು, ಸುಳ್ಳು ಸಾಕ್ಷಿ ಹೇಳಬಾರದು ಎಂಬ ಆಜ್ಞೆಗಳಿರುವ ಪ್ರಾಮುಖ್ಯತೆಗಿಂತಲೂ ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಂಡ ಆಜ್ಞೆಯಿದು. ಹೌದು, ಆರಾಧನೆ ಅದರಲ್ಲೂ

ಯೋಗ್ಯವಾದ ಆರಾಧನೆ ಬಹುಮುಖ್ಯ ಈ ಕಾಲಕ್ಕೆ. ಕ್ರಿಸ್ತನ 2ನೇ ಆಗಮನಕ್ಕೆ ಮುನ್ನ ಈ ಭೂಮಿಗೆ ಎದುರಾಗುವ ಕಠಿಣ ಕಾಲದಲ್ಲಿ ಆರಾಧನೆಯೇ ಕೇಂದ್ರಬಿಂದುವಾಗುವುದು. ಕ್ರೈಸ್ತೀಯ ಶಿಕ್ಷಣವು ಆರಾಧನೆಯೇ ಪ್ರಶ್ನೆಯನ್ನು ತನ್ನ ಪಠ್ಯವಸ್ತುವಿನಲ್ಲಿ: ಆರಾಧನೆಗೆ ಎಂದರೇನು? ಆರಾಧನೆಯನ್ನು ಹೇಗೆ ಮಾಡಬೇಕು? ಆರಾಧನೆ ಏಕೆ ಮುಖ್ಯ ಮತ್ತು ಯಾರನ್ನು ನಾವು ಆರಾಧಿಸಬೇಕು? ಎಂಬ ವಿಷಯಗಳನ್ನು ಸೋದಾಹರಣವಾಗಿ ವಿವರಿಸಲಿ.

**ಪ್ರಕಟನೆ 14:6–12ನ್ನು ಓದಿಕೊಳ್ಳಿರಿ. ಕ್ರಿಸ್ತನು ಎರಡನೇ ಬರೋಣಕ್ಕೆ ಮುನ್ನ ಉಂಟಾಗುವ ಅಂತ್ಯಕಾಲದ ಸಂಧಿಗ್ಧ ಸಮಯದಲ್ಲಿ ಆರಾಧನೆಯ ಪ್ರಶ್ನೆ ಕೇಂದ್ರಬಿಂದುವಾಗುವುದು ಹೇಗೆ ಎಂಬ ವಿಷಯದಲ್ಲಿ ಈ ವಾಕ್ಯಗಳು ಬೋಧಿಸುವುದೇನು?**

**ಸೋಮವಾರ** **ನವೆಂಬರ್ 9**

## ಅವರ ಮಕ್ಕಳಿಗೆ ಅದನ್ನು ಸ್ಪಷ್ಟವಾಗಿ ತಿಳಿಸಿರಿ

ಹಳೇ ಒಡಂಬಡಿಕೆಯ ಕೀರ್ತನೆಗಳು ಕಾಲಕ್ರಮೇಣ ಪುರಾತನ ಇಸ್ರಾಯೇಲ್ಯರ ಧಾರ್ಮಿಕ ಜೀವನದಲ್ಲಿ ಪಾತ್ರವಹಿಸಿದ್ದವು. ಆರಾಧನೆಯ ಸಮಯದಲ್ಲಿ, ಅದರಲ್ಲೂ ವಿಶೇಷವಾಗಿ ಸಾರ್ವಜನಿಕ ಆರಾಧನೆಯ ಸಮಯದಲ್ಲಿ ವಾದ್ಯೋಪಕರಣ-ಗಳೊಂದಿಗೆ, ಕಂಠಪಾಠ ಮಾಡಿದ ಕೀರ್ತನೆಗಳು ಸುಮಧುರವಾಗಿ ಹಾಡಲ್ಪಡುತ್ತಿದ್ದವು. ಹಳೇ ಒಡಂಬಡಿಕೆಯ ಜನ ಹೇಗೆ ಆರಾಧನೆ ಮಾಡಿದ್ದರು ಎಂಬುದಕ್ಕೆ ಇದೂ ಒಂದು ಉದಾಹರಣೆಯಷ್ಟೇ. ಇಸ್ರಾಯೇಲ್ಯರು ಒಂದು ಸಮುದಾಯವಾಗಿ ಕಾರ್ಯವೆಸಗುತ್ತಿದ್ದರು. ಒಂದಾಗಿ, ಒಂದು ಸಮುದಾಯವಾಗಿಯೇ ದೇವರ ಆರಾಧನೆ ಮಾಡುತ್ತಿದ್ದರು.

ಕೀರ್ತನೆಗಳು ಮೂಲತಃ ಕವನಗಳು; ಗೀತೆಗಳಿಗೆ ಸಾಹಿತ್ಯಗಳು. ಗ್ರೀಕ್ ಭಾಷೆಯಲ್ಲಿ ಕೀರ್ತನೆಗೆ ಸಂವಾದಿಯಾದ ಪದ "ಟಾಹಿಲಿಮ್". ಅದರ ಅರ್ಥ "ಸ್ತುತಿ ಗೀತೆಗಳು". ನಾವು ದೇವರಿಗೆ ಸ್ತುತಿ ಗೀತೆ ಹಾಡಿದಾಗ, ನಾವೇನು ಮಾಡುತ್ತೇವೆ? ದೇವರನ್ನು ಆರಾಧಿಸುತ್ತಿರುತ್ತೇವೆ.

ಕೀರ್ತನೆ 78:1–7ನ್ನು ಓದಿಕೊಳ್ಳಿರಿ. ಇಲ್ಲಿನ ಅತ್ಯಾವಶ್ಯ ಸಂದೇಶವೇನು? ಶಿಕ್ಷಣ ಮತ್ತು ಆರಾಧನೆಯ ಪ್ರಶ್ನೆಗೆ ಈ ವಚನಗಳು ಸರಿಯಾಗಿ ಹೊಂದುವುದು ಹೇಗೆ?

---

---

ಕೀರ್ತನೆ 78ರ ಸಂದೇಶದಲ್ಲಿ ಖಂಡಿತವಾಗಿಯೂ ಒಂದು ದೃಢ ಸಂಕಲ್ಪವಿದೆ. ಇಲ್ಲಿ ಆಸಾಫ, "ಪೂರ್ವಕಾಲದ ಗೂಡಾರ್ಥಗಳನ್ನು ಹೊರಡಿಸುವೆನು" (ಕೀ 78:2) ಎಂದು ಹೇಳುವ ಮೂಲಕ "ಗೂಡಾರ್ಥ"ಗಳನ್ನು ಹೇಗೆ ಹಂಚುವುದು ಎಂಬುದನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾನೆ. ಇಲ್ಲಿ "ಗೂಡಾರ್ಥ"ವನ್ನು ಅಶುಭಸೂಚಕ ಎಂಬ ಅರ್ಥದಲ್ಲಿ ಬಳಸಲಾಗಿದೆ. ನಿರ್ಣಾಯಕ ಘಟನೆಗಳು ಇತಿಹಾಸದ ಕಾಲಗರ್ಭದಲ್ಲಿ ಊತುಹೋಗದಿದ್ದಂತೆ, ಪೂರ್ವಕಾಲದ ಸಂಗತಿಗಳು ಬಾಡತೊಡಗುತ್ತವೆ. ಇನ್ನು ಕೆಲವೊಂದು ಭಾಷಾಂತರಗಳಲ್ಲಿ "ಗೂಡಾರ್ಥ"ಗಳನ್ನು "ರಹಸ್ಯ"ವೆಂದು ಅಥವಾ "ಹಳೆಯ ಸತ್ಯಗಳ ಸಿಹಿ ನೆನಪುಗಳು" ಎಂದು ಭಾಷಾಂತರಿಸಲಾಗಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ: ಇಸ್ರಾಯೇಲ್ಯರು ತಮ್ಮ ಶಿಕ್ಷಣದಲ್ಲಿ ಏನನ್ನೇ ಸೇರ್ಪಡೆ ಮಾಡಿದರೂ, ದೇವರು ತಾನು ಆರಿಸಿಕೊಂಡ ಜನಾಂಗವನ್ನು ಹೇಗೆ ಕೈಹಿಡಿದು ನಡೆಸಿದರು ಎಂಬ ಕಥೆಗಳನ್ನು ಮಕ್ಕಳಿಗೆ ಬೋಧನೆ ಮಾಡುವ ರೀತಿಯಲ್ಲಿ ತಮ್ಮ ಪಠ್ಯಕ್ರಮಗಳನ್ನು ಜೋಡಿಸಿಕೊಂಡಿದ್ದರು.

**ಕೀರ್ತನೆ 78:6–17ನ್ನು ಓದಿಕೊಳ್ಳಿರಿ. ಅವರು ತಮ್ಮ ಮಕ್ಕಳಿಗೆ ಕಲಿಸಿ ಕೊಡಬೇಕಾದ ವಿಶಿಷ್ಟವಾದ ಪಾಠಗಳಾವುವು? ಈ ಶಿಕ್ಷಣದ ಅಂತಿಮ ಗುರಿಗಳಾವುವು?**

---

---

ಈ ವಚನದಲ್ಲಿ ನೋಡಿದ ಪ್ರಕಾರ ಶಿಕ್ಷಣದ ಗುರಿ ದೇವರಲ್ಲಿ ಭರವಸೆ ಇಡುವುದನ್ನೂ ಮತ್ತು ದೇವರ ಆಜ್ಞೆಗಳನ್ನು ಕೈಕೊಂಡು ನಡೆಯುವದನ್ನೂ

ಕಲಿಸಿ ಕೊಡುವುದೇ ಆಗಿದೆ. ಪ್ರಕಟನೆ 14:12 ಸಹ ಇದೇ ಆಲೋಚನೆಯನ್ನು ಇಂದು ನಮಗೆ ತಿಳಿಸಿಕೊಡುತ್ತಿರುವುದು ಹೇಗೆ?

**ಮಂಗಳವಾರ** **ನವೆಂಬರ್ 10**

## ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ದೇವಾರಾಧನೆ

ಯೇಸುಸ್ವಾಮಿ ಮನನೊಂದವರಿಗೆ ಹೇಗೆ ಸೇವೆ ಮಾಡಿದನು ಎಂಬುದಕ್ಕೆ ಹೊಸ ಒಡಂಬಡಿಕೆಯಲ್ಲಿ ಒಂದು ಅತ್ಯುತ್ತಮವಾದ ಕಥೆಯಿದೆ. ಅದೇ: ಯೇಸು ಸಮಾರ್ಯ ಹೆಂಗಸಿನ ಸಂಗಡ ಸಂಭಾಷಣೆ ಮಾಡಿದ ಪ್ರಸಂಗ. **ಯೋಹಾನ 4:7–26ರನ್ನು ಓದಿಕೊಳ್ಳಿರಿ. ಯೇಸು ಸಮಾರ್ಯದ ಹೆಂಗಸಿಗೆ ದೇವಾರಾಧನೆಯನ್ನು ಕುರಿತು ಹೇಳುವುದೇನು? ಅವರ ಸಂಭಾಷಣೆ ದೇವಾರಾಧನೆಯತ್ತ ತಿರುಗಿದ್ದು ಏಕೆ?**

ಯೇಸುಸ್ವಾಮಿ ಮತ್ತು ಸಮಾರ್ಯದ ಹೆಂಗಸಿನ ನಡುವೆ ನಡೆದ ಸಂಭಾಷಣೆ ಮುಂದುವರಿಯುತ್ತಿದ್ದಾಗ, ಆಕೆ ವಿಷಯ ಪಲ್ಲಟನೆ ಮಾಡಿ ದೇವಾರಾಧನೆಯ ವಿಷಯುವನ್ನು ತಾನಾಗಿಯೇ ಪ್ರಸ್ತಾಪ ಮಾಡಿ ಚರ್ಚೆಗೆ ಅನುವು ಮಾಡಿಕೊಡುತ್ತಾಳೆ. ಯೇಸುಸ್ವಾಮಿ ಆಕೆಯ ಚಾತುರ್ಯವನ್ನು ಗಮನಿಸುತ್ತಾನೆ. ಆದರೆ ಸುಸಂದರ್ಭವನ್ನು ಉಪಯೋಗಿಸಿಕೊಂಡು ಆಕೆಗೆ ದೇವಾರಾಧನೆಯ ಬಗ್ಗೆ ಆಳವಾದ ಸತ್ಯವೇದ ಪಾಠಮಾಡುತ್ತಾನೆ. ದೇವಾರಾಧನೆ ಯಾವುದನ್ನು ಒಳಗೊಂಡಿರುತ್ತದೆ ಎಂಬುದನ್ನು ತಿಳಿಸಿಕೊಡುತ್ತಾನೆ. ನಮ್ಮ ಇಂದಿನ ಪಾಠದ ಉದ್ದೇಶಕ್ಕೆ ಬಹಳ ಮುಖ್ಯವಾಗಿ ನಾವು ಗಮನಿಸಬೇಕಾದ್ದು, ಆತ ಯೋಹಾನ 4:24ರಲ್ಲಿ ಏನು ಹೇಳಿದ ಎಂಬುದು. ಆತ ಹೇಳಿದ್ದು– "**ದೇವರು ಆತ್ಮ ಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು**" ಅಂದನು.

ದೇವರ ಆರಾಧನೆ "ಆತ್ಮೀಯ ರೀತಿಯಲ್ಲಿ" ನಡೆಯಬೇಕು ಎಂದರೆ ಅದರ ಅರ್ಥ: ಅದು ದೇವರ ಪ್ರಿತಿಯಿಂದ ಚಿಗುರೊಡೆದು ಬರಬೇಕು ಮತ್ತು ಆತನನ್ನು

ವೈಯಕ್ತಿಕವಾಗಿ ಅನುಭವಿಸುವ ಅನುಭವದಿಂದ ಹೊರಹೊಮ್ಮಿ ಬರಬೇಕು. "ಯಾವ ಧರ್ಮ ದೇವರಿಂದಲೇ ಹೊರಹೊಮ್ಮಿ ಬರುತ್ತದೆಯೋ ಆ ಧರ್ಮ, ಆಚರಣೆ ಮಾಡುವವನನ್ನು ದೇವರೆಡೆಗೇ ಕರೆದೊಯ್ಯುತ್ತದೆ. ಆತನಿಗೆ ಯೋಗ್ಯವಾದ ರೀತಿಯಲ್ಲಿ ಸೇವೆ ಸಲ್ಲಿಸಬೇಕಾದರೆ, ನಾವು ದೇವರಾತ್ಮನಿಂದ ಹುಟ್ಟಿ ಬರಬೇಕು. ಈ ಪ್ರಕ್ರಿಯೆ ಹೃದಯವನ್ನು ಶುದ್ಧಗೊಳಿಸುತ್ತದೆ ಮತ್ತು ಮನಸ್ಸನ್ನು ಚೈತನ್ಯಗೊಳಿಸುತ್ತದೆ. ದೇವರನ್ನು ತಿಳಿದುಕೊಳ್ಳುವುದಕ್ಕೆ ಮತ್ತು ಪ್ರೀತಿ ಮಾಡುವುದಕ್ಕೆ ಒಂದು ಹೊಸ ಸಾಮರ್ಥ್ಯವನ್ನು ಕೊಡುತ್ತದೆ. ದೇವರು ನಮ್ಮಿಂದ ಏನೆಲ್ಲ ನಿರೀಕ್ಷೆ ಮಾಡುತ್ತಾನೋ ಅದೆಲ್ಲವನ್ನು ಪೂರೈಸಲು ಬೇಕಾದ ಹೃತ್ಪೂರ್ವಕವಾದ ವಿಧೇಯತೆಯನ್ನೂ ಸಹ ಕೊಡುತ್ತದೆ. ಇದೇ ತಾನೇ ನಿಜವಾದ, ಸತ್ಯವಾದ ಆರಾಧನೆ. ಇದು ನಮ್ಮಲ್ಲಿ ಕೆಲಸ ಮಾಡುವ ಪವಿತ್ರಾತ್ಮನ ಫಲಗಳು" – ಎಲೆನ್ ಜಿ ವೈಟ್, ದಿ ಡಿಸೈರ್ ಆಫ್ ಏಜಸ್, ಪುಟ 189.

ಇದೇ ಸಂದರ್ಭದಲ್ಲಿ, ಆರಾಧನೆ "ಸತ್ಯಕ್ಕೆ" ತಕ್ಕ ಹಾಗೆ ನಡೆಯಲಿ. ನಮಗೆ ದೇವರ ಕುರಿತ ಜ್ಞಾನ ನಿರ್ದೋಷವಾಗಿರಲಿ. ಆತನು ಯಾರು ಮತ್ತು ನಮ್ಮಿಂದ ಆತ ಏನನ್ನು ನಿರೀಕ್ಷಿಸುತ್ತಾನೆ ಎಂಬ ವಿಷಯದಲ್ಲಿಯೂ ಸುಜ್ಞಾನವಿರಲಿ. ಇನ್ನೊಂದು ರೀತಿಯಲ್ಲಿ ಹೇಳಬೇಕಾದರೆ, ತತ್ವಗಳನ್ನೂ ಇದು ಒಳಗೊಂಡಿರುತ್ತದೆ. (ಈ ಸತ್ಯ ಎಷ್ಟು ಸತ್ಯಪೂರ್ಣ! ಉದಾ: ನಮ್ಮನ್ನು ನಿತ್ಯ ನರಕ ಬೆಂಕಿಯಲ್ಲಿ ಬೇಯಿಸದಂತಹ ದೇವರನ್ನೇ ಆರಾಧಿಸುತ್ತಿದ್ದೇವೆ ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು).

ಆರಾಧನೆಯಲ್ಲಿ ಎರಡು ಮುಖ್ಯವಾದ ಅಂಶಗಳನ್ನು ನಾವಿಲ್ಲಿ ಗಮನಿಸಬಹುದು. ದೇವರನ್ನು ಅರಿಯುವುದರಿಂದ ಮತ್ತು ಆತನಿಗೆ ವಿಧೇಯರಾಗಿ ನಡೆದುಕೊಳ್ಳುವುದರಿಂದ ಬರುವಂತಹ ಅನುಭವ, ಮತ್ತು ದೇವರನ್ನು ಕುರಿತು ನಮಗೆ ಪ್ರಕಟವಾದ ವಾಸ್ತವ ಸತ್ಯಗಳು. ಸತ್ಯವಿಲ್ಲದ ಆತ್ಮ ಆಳವಿಲ್ಲದ ಭಾವಾತಿರೇಕಕ್ಕೆ ಕೊಂಡೊಯ್ಯುತ್ತದೆ. ಹಾಗೆ ಕೊಂಡೊಯ್ದಾಗ ಅದು ಒಂದು ಚಂಚಲ ಭಾವನೆಯನ್ನು ಕಟ್ಟಿಕೊಡುತ್ತದೆ. ಇದಕ್ಕೆ ವಿಭಿನ್ನವಾಗಿ, ಸತ್ಯವಿಲ್ಲದ ಆತ್ಮ ಜೀವವಿಲ್ಲದ ಶಾಸ್ತ್ರಾಚಾರವಷ್ಟೇ. ಆದ್ದರಿಂದ ಎರಡೂ ನಮಗೆ ಅವಶ್ಯವೇ.

**"ದೇವರನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕಹಾಗೆ ಆರಾಧಿಸಬೇಕು" ಎಂದು ಯಾರಿಗಾದರೂ ಬೋಧನೆ ಮಾಡಬೇಕಾಗಿ ಬಂದರೆ, ಏನೆಂದು ಬೋಧಿಸುವಿರಿ? ಒಂದಕ್ಕಿಂತ ಇನ್ನೊಂದಕ್ಕೆ ಹೆಚ್ಚಿನ ಒತ್ತಾಯ ಅಥವಾ ಬಲವನ್ನು ಯಾವ ಸಂದರ್ಭದಲ್ಲಿ ಒಬ್ಬರು ತೋರಿಸಬಹುದು?**

______________________________________________

______________________________________________

**ಬುಧವಾರ** **ನವೆಂಬರ್ 11**

## ಪರಿಶುದ್ಧತ್ವವೆಂಬ ಭೂಷಣ

1 ಪೂ.ಕಾ.ವೃ 16:1–36ನ್ನು ಓದಿಕೊಳ್ಳಿರಿ. ಈ ದೃಶ್ಯವನ್ನು ನಿಮ್ಮ ಮನಸ್ಸಿನ ತೆರೆಯ ಮೇಲೆ ಮೂಡಿಸಿಕೊಳ್ಳಿ. ಇದೊಂದು ಪವಿತ್ರ, ಭಯಾನಕ, ಅಥವಾ ಉತ್ಸವದ ಮತ್ತು ಸಂಭ್ರಮದ ದೃಶ್ಯವಾಗಿ ಕಲ್ಪನೆ ಮಾಡಿ ನೋಡಿದ್ದೀರಾ? **ಯಾವ ರೀತಿಯಲ್ಲಿ ಈ ದೃಶ್ಯ ಭಾವನೆ ಮತ್ತು ಉತ್ಸವ ಈ ಎರಡರ ಸಮ್ಮಿಶ್ರ ಚಿತ್ರಣ? ಈ ದೃಶ್ಯದಿಂದ ನಾವು ಆರಾಧನೆಯ ಬಗ್ಗೆ ಕಲಿಯಬೇಕಾದದ್ದು ಏನು? ಮತ್ತು ನಾವು ಆರಾಧನೆಯನ್ನು ಹೇಗೆ ಬೋಧಿಸಬೇಕು ಹಾಗೂ ಅನುಭವಿಸಬೇಕು?**

______________________________________________

______________________________________________

ಅವರು ಆ ಕಾಲಕೆ ಆರಾಧನೆ ಮಾಡುತ್ತಿದ್ದ ಸ್ಥಳ : ಗುಡಾರ. ಪುರಾತನ ಕಾಲದ ಇಸ್ರಾಯೇಲ್ಯರೊಂದಿಗಿದ್ದ ದೇವರು ಗುಡಾರದಲ್ಲಿ ವಾಸಿಸಿದನು. ಆ ಗುಡಾರದಲ್ಲಿಯೇ ಅವರಿಗೆ ರಕ್ಷಣೆಯ ಯೋಜನೆಯನ್ನು ಪ್ರಕಟಪಡಿಸಲಾಯ್ತು. ಹೀಗಾಗಿ ಆರಾಧನೆಯ ಮತ್ತು ಶಿಕ್ಷಣದ ಕೇಂದ್ರಬಿಂದು ಯೇಸುಸ್ವಾಮಿ ಮತ್ತು ರಕ್ಷಣೆಯ ಯೋಜನೆಯೇ ಆಗಿತ್ತು. ಗುಡಾರ ಸೇವೆಯಲ್ಲಿ ಅವುಗಳ ಪೂರ್ವ ಛಾಯೆ ಎದ್ದುಕಾಣುತ್ತಿದ್ದವು. ದೇವರು ಅಲ್ಲಿ ಏನೆಲ್ಲ ಮಾಡಿದನೋ, ಅವೆಲ್ಲ ಸ್ತುತಿಗೂ ಮತ್ತು ಆರಾಧನೆಗೂ ಪೂಜ್ಯವೆನಿಸಿವೆ. ಆತನ ತ್ಯಾಗದ ಮರಣ ಮತ್ತು ನಮ್ಮ (ನಾವು ಸಾಯಬೇಕಾಗಿದ್ದ ಸ್ಥಳದಲ್ಲಿ ನಮಗೆ) ಬದಲಿಯಾಗಿ ತಾನು ಪ್ರಾಣ ಬಿಟ್ಟದ್ದು ಇವೆಲ್ಲ ಗುಡಾರ ಸೇವೆಯಲ್ಲಿ ಅರ್ಥಪೂರ್ಣ

ಸಂಕೇಟಗಳಾಗಿದ್ದು ಆ ಮೂಲಕ ನಮಗೆ ನಿತ್ಯಜೀವ ಪ್ರಾಪ್ತ ಮಾಡುವುದೇ ಆತನ ಉದ್ದೇಶವಾಗಿತ್ತು.

ಈ ವಾಕ್ಯ ಭಾಗದಲ್ಲಿರುವ "ಸೌವಾರ್ತಿಕ" ಮುನ್ ನುಗ್ಗುವಿಕೆಯನ್ನು ಗಮನಿಸಿ. ಇಡೀ ಲೋಕ ಇಸ್ರಾಯೇಲ್ ದೇವರನ್ನು ಕುರಿತು ಕಲಿಯಬೇಕಾಗಿತ್ತು. **1 ಪೂ.ಕಾ.ವೃ. 16:29ನ್ನು ಓದಿಕೊಳ್ಳಿರಿ: "ಯೆಹೋವನ ನಾಮಕ್ಕೆ ಯೋಗ್ಯವಾದ ಘನವನ್ನು ಸಲ್ಲಿಸಿರಿ; ಕಾಣಿಕೆಸಹಿತ ಆತನ ಸನ್ನಿಧಿಗೆ ಬನ್ನಿರಿ. ಪರಿಶುದ್ಧತ್ವವೆಂಬ ಭೂಷಣದೊಡನೆ ಯೆಹೋವನಿಗೆ ನಮಸ್ಕರಿಸಿರಿ". ಇಲ್ಲಿ ಬರುವ "ಪರಿಶುದ್ಧತ್ವವೆಂಬ ಭೂಷಣ" ಎಂಬುದರ ಅರ್ಥವೇನು?**

---

---

ಆರಂಭಿಕರು, ಅವರು ಯಾರೇ ಆಗಲಿ, ಪಾಪ ಅದೆಷ್ಟು ಕುರೂಪ, ಅದೆಷ್ಟು ಹಾನಿಕರ ಮತ್ತು ಅದೆಷ್ಟು ಹೀನಾಯವಾದದ್ದು ಎಂದು ಅವರಿಗೆ ಖಂಡಿತ ಅನ್ನಿಸಬಹುದು. ಇಸ್ರಾಯೇಲ್ಯರ ಸುತ್ತಮುತ್ತಲ ದೇಶಗಳಲ್ಲಿ, ಮಕ್ಕಳನ್ನೇ ಆಹುತಿ ಕೊಡುವುದರಿಂದ ಹಿಡಿದು, ಅಸಹ್ಯ, ಭಯಂಕರ ಮತ್ತು ಹೀನಾಯವಾದ ಆರಾಧನೆಯ ಪದ್ಧತಿಗಳನ್ನು ನಮ್ಮಿಂದ ಕಲ್ಪಿಸಿಕೂಡ ನೋಡಲು ಸಾಧ್ಯವಿಲ್ಲ. ಇಂತಹ ಆರಾಧನೆಯ ಅಭ್ಯಾಸ ಮಾಡಿದವರು ಅದರಷ್ಟೇ ಅಸಹ್ಯರು ಎಂಬುದರಲ್ಲಿ ಪ್ರಶ್ನೆಯೇ ಇಲ್ಲ.

ಆ ದೇಶಗಳಿಗೆ ಹೋಲಿಸಿದರೆ ಇಸ್ರಾಯೇಲ್ ದೇಶ ಭಿನ್ನವಾಗಿತ್ತು. ತನ್ನ ಸುತ್ತಮುತ್ತಲು ದೇಶಗಳ ಕೆಟ್ಟ ಸಂಪ್ರದಾಯಗಳನ್ನು ಅನುಸರಿಸದೆ, ತನ್ನನ್ನು ಪ್ರತ್ಯೇಕಿಸಿಕೊಂಡು, ತನ್ನ ಪಾವಿತ್ರ್ಯತೆಯನ್ನು ಕಾಯ್ದುಕೊಂಡಿತ್ತು. ಅವರ ಹೃದಯ ಮತ್ತು ಮನಸ್ಸಿನ ಪಾವಿತ್ರ್ಯವನ್ನು ಕಾಪಾಡಿಕೊಂಡಿದ್ದರು. ಇಂತಹ ಪಾವಿತ್ರ್ಯತೆ ದೇವರ ಆರಾಧನೆಗೆ ಅರ್ಥಪೂರ್ಣತೆಯನ್ನೂ ಮತ್ತು ಪವಿತ್ರತ್ವವೆಂಬ ಭೂಷಣವನ್ನೂ ನೀಡಿತ್ತು. ಆದರೆ ಭ್ರಷ್ಟತೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು, ಅವರ ಹೃದಯ ದೇವರಿಂದ ದೂರವಾಗಿದ್ದರೂ, ದೇವಾರಾಧನೆಗೆ

ಬರುತ್ತಿದ್ದವರನ್ನು ಹಳೇ ಒಡಂಬಡಿಕೆಯ ಪ್ರವಾದಿಗಳು ಮತ್ತೆ ಮತ್ತೆ ಖಂಡಿಸುತ್ತಿದ್ದರು.

**ಗುರುವಾರ** **ನವೆಂಬರ್ 12**

## ಶಿಕ್ಷಣದಲ್ಲಿ ವಿಗ್ರಹಾರಾಧನೆ

**ಪುರಾತನ ಇಸ್ರಾಯೇಲ್ಯರು ತಮ್ಮ ಸುತ್ತಮುತ್ತ ಧಾರ್ಮಿಕ ಜನರಿಂದ ಆವರಿಸಲ್ಪಟ್ಟಿದ್ದರು. ಎಂತಹ ಧಾರ್ಮಿಕ ಜನರೆಂದರೆ, ಅವರು ತಮ್ಮ ದೇವರುಗಳನ್ನು ಶಾಂತಗೊಳಿಸುವುದಕ್ಕೋಸ್ಕರ ತಮ್ಮ ಸ್ವಂತ ಮಕ್ಕಳನ್ನೇ ಆಹುತಿಕೊಡುತ್ತಿದ್ದರು. ಇದೇನಾ ಸಮರ್ಪಣೆಯೆಂದರೆ?**

ಇಸ್ರಾಯೇಲ್ಯರ ಸುತ್ತಮುತ್ತ ಇದ್ದ ವಿಗ್ರಹಾರಾಧಕರ ವಿಗ್ರಹಾರಾಧನೆಯಿಂದಲೂ ಮತ್ತು ತಪ್ಪಾದ ಆರಾಧನೆಯಿಂದಲೂ ಅವರನ್ನು ತಪ್ಪಿಸಿ ಕಾಪಾಡುವುದು, ಸತ್ಯದೇವರನ್ನು ಸತ್ಯಕ್ಕನುಸಾರವಾಗಿ ಮಾಡುವ ದೇವಾರಾಧನೆಯ ಒಂದು ಮುಖ್ಯ ಭಾಗವಾಗಿತ್ತು. ಎಲ್ಲಾ ರೀತಿಯಲ್ಲೂ ಎಚ್ಚರಿಕೆ ನೀಡಿದ್ದಾಗ್ಯೂ, ಇಸ್ರಾಯೇಲ್ಯರು ವಿಗ್ರಹಾರಾಧನೆಯ ಅಭ್ಯಾಸಗಳಿಗೆ ಬಲಿಯಾಗಿಬಿಟ್ಟಿದ್ದರು.

ಇಂದು ನಮ್ಮ ಬಗ್ಗೆ ಏನು ಹೇಳೋಣ? ಸತ್ಯ ದೇವರನ್ನು ಆರಾಧಿಸುವುದು, ದೇವರು ನಮಗೆ ಏನೆಲ್ಲಾ ಮಾಡಿದ್ದಾನೆ ಎಂಬುದನ್ನು ಮೆಲುಕು ಹಾಕುವುದನ್ನು ನೆನೆಸಿ ನೋಡುವುದೇ ಆಗಿದೆ. ಅದು ಬಹುಮುಖ್ಯ ಸಹ. ಅದರಲ್ಲಿ ವಿಶೇಷವಾಗಿ ಆಧುನಿಕ ವಿಗ್ರಹಾರಾಧನೆಯ ಅಪಾಯದ ಅಂಚಿನಲ್ಲಿ ಹಾಗೆ ಮಾಡುವುದು ತುಂಬಾ ಮುಖ್ಯವಲ್ಲವೇ?

**ಮಾರ್ಕ 7:1–13ನ್ನು ಓದಿಕೊಳ್ಳಿರಿ. ಕ್ರೈಸ್ತೀಯ ಶಿಕ್ಷಣ ಮತ್ತು ಪ್ರಪಂಚದಿಂದ ಆರಿಸಿಕೊಂಡ ತಪ್ಪಾದ ಬೋಧನೆಯ ಅಪಾಯ, ಅವು ನಮ್ಮ ನಂಬಿಕೆಯ ಮೇಲೆ ಬೀರುತ್ತಿರುವ ಋಣಾತ್ಮಕ ಪ್ರಭಾವ ಇವುಗಳ ಹಿನ್ನೆಲೆಯಲ್ಲಿ 7–9 ವಚನಗಳಲ್ಲಿ ಕೊಡಲ್ಪಟ್ಟಿರುವ ತತ್ವಗಳು ಇಂದು ನಮಗೆ ಹೇಗೆ ಅನ್ವಯವಾಗುತ್ತವೆ?**

ಇಂದಿನ ಪ್ರಪಂಚದಲ್ಲಿ ಅನೇಕ ಬೃಹತ್ ಬೌದ್ಧಿಕ ಆಲೋಚನೆಗಳು, ವಾಸ್ತವತೆಯ ನೈಸರ್ಗಿಕ ದೃಷ್ಟಿಕೋನವನ್ನು ಆಧರಿಸಿವೆ. ಇಂದಿನ ಶಾಲೆಗಳಲ್ಲಿ ಕಲಿಸುತ್ತಿರುವ ಅನೇಕ ವಿಷಯಗಳೂ ಕೂಡ ಇಂತದ್ದೆ ಆಲೋಚನೆಗಳಿಂದಲೇ ಕೂಡಿವೆ. ಆ ಎಲ್ಲಾ ಬೋಧನೆಗಳು ಸತ್ಯವೇದದ ಬೋಧನೆಗಳಿಗೆ ವಿರುದ್ಧವಾಗಿವೆ. ಯಾವುದೇ ಒಂದು ವಿಷಯವನ್ನು ಸತ್ಯವೆಂದು ಪ್ರತಿಪಾದಿಸಿ, ಅದರ ಆಧಾರದ ಮೇಲೆ ಸಿದ್ಧಾಂತಗಳನ್ನು ರಚಿಸಿ, ಅವುಗಳನ್ನು ಆಚರಣೆಯಲ್ಲಿ ತಂದುಬಿಟ್ಟಾಗ ನಾವು ಕೂಡ ಆ ಆಲೋಚನೆಗಳನ್ನು ಪೂಜ್ಯಭಾವದಿಂದ ಕಾಣುವುದಕ್ಕೆ ಪ್ರಚೋದಿಸಲ್ಪಡುತ್ತೇವೆ. ಗಣಿತಜ್ಞರುಗಳು ಈ ಆಲೋಚನೆಗಳನ್ನು ವ್ಯಾಪಾರ ಮಾಡಿ ಬಿಡುತ್ತಾರೆ. ಇಲ್ಲಿನ ಸಮಸ್ಯೆ ಏನೆಂದರೆ: ಬಹಳಷ್ಟು ಸಲ ಈ ಆಲೋಚನೆಗಳು ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿರುತ್ತವೆ. ಆದರೂ ಈ ಕಾಲದ ಬೋಧನೆಯೂ ಮತ್ತು ಅದನ್ನು ಸತ್ಯವೆಂದು ನಂಬಿಬಿಟ್ಟಿದ್ದರಿಂದಲೂ ಜನ ಆ ಆಲೋಚನೆಗಳನ್ನು ಕ್ರೈಸ್ತೀಯ ಶಿಕ್ಷಣದೊಂದಿಗೆ ಸಮ್ಮಿಕರಿಸಿಬಿಡುತ್ತಾರೆ. ಅದನ್ನು ಸಾಧಿಸಲು ಇರುವ ಒಂದೇ ಮಾರ್ಗವೆಂದರೆ ನಮ್ಮ ನಂಬಿಕೆಯನ್ನು ಆ ಆಲೋಚನೆಗಳೊಂದಿಗೆ ರಾಜಿ ಮಾಡಿಕೊಂಡುಬಿಡುವುದು. ಅಂದರೆ: ಪ್ರಸ್ತುತ ಆಲೋಚನೆಗಳಿಗೆ ಧರ್ಮಶಾಸ್ತ್ರ ಹೊಂದಿಕೊಳ್ಳುವುದಕ್ಕೋಸ್ಕರ ಸತ್ಯವನ್ನು ತಿರುಚುವ ಇಲ್ಲವೇ ಅದನ್ನು ವಿರೂಪಗೊಳಿಸುವ ಮೂಲಕ ಇಂದಿನ ಆಲೋಚನೆಗಳಿಗೆ ಧರ್ಮಶಾಸ್ತ್ರವೇ ಹೊಂದಿಕೊಳ್ಳುವಂತೆ ಮಾಡಲಾಗುತ್ತಿದೆ.

ಧರ್ಮಶಾಸ್ತ್ರದೊಂದಿಗೆ ಘರ್ಷಣೆ ಮಾಡಿಕೊಳ್ಳಬಹುದಾದ ಕೆಲವು ಪ್ರಸ್ತುತ ಜನಪ್ರಿಯ ನಂಬಿಕೆಗಳು ಯಾವುವು? ಆ ನಂಬಿಕೆಗಳು ನಮ್ಮ ಶೈಕ್ಷಣಿಕ ವ್ಯವಸ್ಥೆಯೊಂದಿಗೆ ಸಂಯೋಜನೆಗೊಳ್ಳದಂತೆ ಸಭೆ ಹೇಗೆ ಆ ನಂಬಿಕೆಗಳಿಗೆ ವಿರುದ್ಧವಾಗಿ ಆಕ್ಷೇಪಣೆ ವ್ಯಕ್ತಪಡಿಸಬಹುದು?

**ಶುಕ್ರವಾರ** **ನವೆಂಬರ್ 13**

**ಹೆಚ್ಚಿನ ಚಿಂತನೆ : "ಹೃದಯವೂ ಎಲ್ಲಕ್ಕಿಂತಲೂ ಮಚಕ; ಗುಣವಾಗದ**

**ರೋಗಕ್ಕೆ ಒಳಗಾಗಿದೆ.**" ಧಾರ್ಮಿಕ ಪ್ರೊಫೆಸರ್‌ಗಳು ತಾವು ಕ್ರಿಸ್ತನಂಬಿಕೆ–ಯಲ್ಲಿದ್ದಿವೆಯೋ ಎಂಬ ವಿಷಯದಲ್ಲಿ ತಮ್ಮ ಹೃದಯವನ್ನು ಶೋಧಿಸಿ ನೋಡುವುದಕ್ಕೆ ಸಿದ್ಧರಿಲ್ಲ. ಅನೇಕರು ತಪ್ಪಾದ ನಿರೀಕ್ಷೆಯಲ್ಲಿ ಒಲವು ತೋರುತ್ತಿರುವುದು ಭಯಾನಕ ಸತ್ಯಾಂಶ. ಮತ್ತೆ ಕೆಲವರು ಹತ್ತಾರು ವರ್ಷಗಳ ಹಿಂದೆ ಪಡೆದುಕೊಂಡ ಅನುಭವಗಳಿಗೇ ಅಂಟಿಕೊಂಡು ಬಾಳು ಸಾಗಿಸುತ್ತಾರೆ; ಆದರೆ ಈ ಹೃದಯ ಶೋಧನೆಯ ಸಮಯಕ್ಕೆ ಅವರನ್ನು ಬರಮಾಡಿ, ಪ್ರತಿದಿನ ತಮ್ಮ ಅನುಭವಗಳನ್ನು ಹಂಚಿಕೊಳ್ಳುವಂತೆ ಹೇಳಿದಾಗ, ಅವರು ಏನನ್ನೂ ಹೇಳಿಕೊಳ್ಳುವುದಿಲ್ಲ. ಅವರು ಸತ್ಯವನ್ನು ಅಂಗೀಕಾರ ಮಾಡಿಕೊಂಡಿರುವುದರಿಂದ, ಆ ಅಂಗೀಕಾರ ನಮ್ಮನ್ನು ಕಾಪಾಡುತ್ತದೆ ಎಂಬ ಚಿಂತನೆ ಅವರದು. ದೇವರು ದ್ವೇಷಿಸುವ ಪಾಪಗಳ ವಿರುದ್ಧ ಹೋರಾಡಿ ಗೆದ್ದುಬಿಟ್ಟರೆ, ಯೇಸು ಆ ಮನೆಗೆ ಬರುತ್ತಾನೆ. ಆ ಪಾಪಿಗಳ ಜೊತೆಯಲ್ಲಿ ಕುಳಿತು ಊಟಮಾಡುತ್ತಾನೆ. ಪಾಪಗಳನ್ನು ಗೆದ್ದ ಆ ಪಾಪಿಗಳು ಯೇಸು ಸ್ವಾಮಿಯೊಂದಿಗೆ ಕುಳಿತು ಊಟಮಾಡುವರು. ಹೀಗಾದಾಗ ನೀವು ಯೇಸುಕ್ರಿಸ್ತನಿಂದ ಸಾಮರ್ಥ್ಯವನ್ನು ಪಡೆಯುವಿರಿ; ಈಗ ನೀವು ಕ್ರಿಸ್ತನಲ್ಲಿ ಬೆಳೆಯುವಿರಿ. ಪವಿತ್ರವಾದ ಜಯಗಳಿಸಿದವರು– ದೇವರಿಗೆ ಸ್ತೋತ್ರ, ಕ್ರಿಸ್ತನ ಮೂಲಕ ಆತನು ನಮಗೆ ಜಯ ಕೊಟ್ಟಿದ್ದಾನೆ. ಉಗುರುಬೆಚ್ಚನೆಯ ಧರ್ಮ ಪರಿಪಾಲನೆ ಮಾಡುವ ವ್ಯಕ್ತಿಗಳು, ಆತನ ನಾಮವನ್ನು ಎಂದಿಗೂ ಎತ್ತದಿದ್ದರೆ, ದೇವರಿಗೆ ಎಷ್ಟೋ ಸಮಾಧಾನವಾಗುತ್ತದೆ. ಅವರು ನಂಬಿಗಸ್ತ ಕ್ರಿಸ್ತನ ಹಿಂಬಾಲಕರಿಗೆ ಸತತವಾಗಿ ಭಾರವಾಗಿರುವರು. ಅವಿಶ್ವಾಸಿಗಳಿಗೆ ಅಡ್ಡಿ ಒಡ್ಡುವವರು, ಅವರನ್ನು ಕಂಡು ದುಷ್ಟ ದೂತರುಗಳು ಸಂಭ್ರಮಿಸುವರು ಮತ್ತು ದೇವರ ಶಿಷ್ಟ ದೇವದೂತರುಗಳನ್ನು ಚುಚ್ಚು ಮಾತುಗಳಿಂದ ಹಂಗಿಸುವರು. ಅಂತಹವರು ಸ್ವಂತ ನೆಲಕ್ಕಾಗಲಿ, ಅನ್ಯದೇಶಕ್ಕಾಗಲಿ ಶಾಪವಿದ್ದಂತೆ. ತುಟಿಗಳಿಂದಷ್ಟೇ ಅವರು ದೇವರಿಗೆ ಸಮೀಪರು, ಆದರೆ ಅವರ ಹೃದಯ ದೇವರಿಂದ ಬಹುದೂರ ಹೊರಟುಹೋಗಿದೆ" – ಎಲೆನ್ ಜಿ ವೈಟ್, ಸ್ಪಿರಿಚ್ಯುಅಲ್ ಗಿಫ್ಟ್ಸ್, ಸಂಪುಟ 2, ಪುಟ 227.

## ಚರ್ಚಿಸಬೇಕಾದ ಪ್ರಶ್ನೆಗಳು

1. ಮಾರ್ಕ 7:1–13ನ್ನು ಓದಿಕೊಂಡಾಗ, ತಪ್ಪಾದ ದೇವಾರಾಧನೆಗೆ ಕಾರಣ ಮನಸ್ಸಿನ ಸಮಸ್ಯೆ ಎಂದು ಕಲಿತುಕೊಂಡೆವು. ಯಾವ ಆರಾಧನೆ ಹೃದಯದಾಳದಿಂದ ಬಾರದೆ, ಕೇವಲ ತುಟಿಯಿಂದ ಮಾತ್ರ ಬರುವಂತದ್ದಾಗಿರುತ್ತದೆಯೋ ಅಂತಹ ಆರಾಧನೆಗೆ ದೇವರು ಲಕ್ಷ್ಯ ಕೊಡುವುದಿಲ್ಲ. ಸುವಾರ್ತೆ ಮತ್ತು ನಮ್ಮ ಸಲುವಾಗಿ ತನ್ನ ಪ್ರಾಣವನ್ನೇ ಸಮರ್ಪಣೆ ಮಾಡಿದ ಯೇಸುಕ್ರಿಸ್ತನ ಕಥೆ, ನಿಜವಾಗಿಯೂ, ಹೃದಯಗಳು ದೇವರನ್ನು ಪ್ರೀತಿ ಮಾಡುವುದಕ್ಕೆ ಅತ್ಯಂತ ಬಲವಾದ ಮಾರ್ಗವಾಗಿರುವುದು ಏಕೆ?

2. ದೇವಾರಾಧನೆ ಆತ್ಮೀಯ ರೀತಿಯಲ್ಲಿಯೂ ಮತ್ತು ಸತ್ಯಕ್ಕನುಸಾರವಾಗಿಯೂ ನಡೆಯಬೇಕು ಎಂಬ ಆಲೋಚನೆಯನ್ನು ಧ್ಯಾನಿಸಿರಿ. ಒಂದನ್ನು ಮಾಡಿ ಇನ್ನೊಂದನ್ನು ಕೈಬಿಡಬಹುದೇ? ಅಥವಾ ನಿಜವಾದ ಆರಾಧನೆ ಎರಡನ್ನೂ ಆಶಿಸುವುದೇ? ಹಾಗಿದ್ದರೆ, ಏಕೆ ಹಾಗೆ ಮಾಡಬೇಕು?

3. ಹೌದು, ದೇವಾರಾಧನೆ ಸರಿಯಾದ ರೀತಿಯಲ್ಲಿ ನಡೆಯಬೇಕಾದರೆ, ನಮ್ಮ ಹೃದಯ ದೇವರೊಂದಿಗೆ ಪ್ರಾಮಾಣಿಕ ಸಂಬಂಧ ಹೊಂದಿರಬೇಕು. ಈ ಮಾತಿನ ಅರ್ಥವೇನು? ದೇವರ ಆರಾಧನೆ ಪ್ರಾರಂಭ ಮಾಡುವ ಮುನ್ನ ದೇವರೊಂದಿಗಿನ ನಿಮ್ಮ ಸಂಬಂಧ ಸರಿಯಾಗಿರುವುದಕ್ಕಾಗಿ, ನಿಮ್ಮ ಜೀವನ ಪರಿಪೂರ್ಣತೆ ಸಾಧಿಸುವುದಕ್ಕಾಗಿ ಕಾಯಬೇಕೇ? ದೇವಾರಾಧನೆ, ಸತ್ಯವಾದ ದೇವಾರಾಧನೆ, ದೇವರೊಂದಿಗೆ ನಿಮ್ಮ ಹೃದಯ, ಸಂಬಂಧವನ್ನು ಸರಿಪಡಿಸಲು ಹೇಗೆ ಸಹಾಯ ಮಾಡುತ್ತದೆ?